"ಮಧುರ ಮಕ್ಕಳೇ - ನಿಮ್ಮನ್ನು ಜ್ಞಾನ-ಯೋಗದಿಂದ ಶೃಂಗಾರ ಮಾಡಲು ತಂದೆಯು ಬಂದಿದ್ದಾರೆ, ಆ ಶೃಂಗಾರವನ್ನು ಅವಿನಾಶಿಯಾಗಿ ಇಟ್ಟುಕೊಳ್ಳಲು ಎಂದೂ ಮಾಯೆಯಿಂದ ಸೋಲಬಾರದು"

ಪ್ರಶ್ನೆ: ಯಾವ ಒಂದು ಚಿಕ್ಕ ಮಾತು ನಿಶ್ಚಯ ಬುದ್ಧಿ ಮಕ್ಕಳ ನಿಶ್ಚಯವನ್ನು ದೂರಗೊಳಿಸಿ ಸಂಶಯ ಬುದ್ಧಿಯವರನ್ನಾಗಿ ಮಾಡುತ್ತದೆ?

ಉತ್ತರ: ಒಂದುವೇಳೆ ನಿಶ್ಚಯ ಬುದ್ಧಿ ಮಕ್ಕಳು ನಡೆಯುತ್ತಾ-ನಡೆಯುತ್ತಾ ಯಾವುದೇ ಚಿಕ್ಕ ತಪ್ಪಿನ ಭ್ರಮೆಯಲ್ಲಿ ಸಿಕ್ಕಿಕೊಂಡರೆ ನಿಶ್ಚಯವು ತುಂಡಾಗುತ್ತದೆ. ಶ್ರೀಮತದಲ್ಲಿ ಭ್ರಮೆಯು ಉತ್ಪನ್ನವಾದರೆ ಮಾಯೆಯು ಸಂಶಯ ಬುದ್ಧಿಯವರನ್ನಾಗಿ ಮಾಡುತ್ತದೆ. ಸಂಶಯ ಬುದ್ಧಿಯಿರುವ ಮಕ್ಕಳು ಸೇವೆಯನ್ನೂ ಮಾಡಲು ಸಾಧ್ಯವಿಲ್ಲ ಹಾಗೂ ಅವರಿಂದ ವಿಕಾರಗಳನ್ನು ಗೆಲ್ಲುವ ಶ್ರಮ ಪಡುವುದಕ್ಕೂ ಆಗುವುದಿಲ್ಲ. ಇಂತಹ ಬಲಹೀನ ಮಕ್ಕಳಿಗೂ ಸಹ ದಯಾಹೃದಯಿ ತಂದೆಯು ಸಲಹೆ ಕೊಡುತ್ತಾರೆ- ಮಕ್ಕಳೇ, ನಿಮಗೆ ಒಂದುವೇಳೆ ವಿಕಾರವು ಸತಾಯಿಸುತ್ತದೆ, ಸೇವೆಯನ್ನೂ ಮಾಡಲು ಸಾಧ್ಯವಿಲ್ಲವೆಂದರೆ ತಂದೆಯನ್ನು ನೆನಪು ಮಾಡಿ.

ಗೀತೆ: ನೀವೇ ತಾಯಿ, ತಂದೆ........

ಓಂ ಶಾಂತಿ. ಇದು ಯಾರ ಮಹಿಮೆಯಾಗಿದೆ? ತಾಯಿ-ತಂದೆಯ ಮಹಿಮೆಯಾಗಿದೆ. ನೀವು ಆ ತಾಯಿ-ತಂದೆಯ ಮಕ್ಕಳಾಗಿದ್ದೀರಿ. ಅವರಿಗೆ ಬೇಹದ್ದಿನ ರಚಯಿತನೆಂದು ಕರೆಯಲಾಗುತ್ತದೆ. ಎಷ್ಟೊಂದು ಬ್ರಹ್ಮಾಕುಮಾರ-ಕುಮಾರಿಯರಿದ್ದಾರೆ. ಜಗದಂಬಾ ಮತ್ತು ಜಗತ್ಪಿತ ಬ್ರಹ್ಮಾರವರ ಚಿತ್ರವಿದೆ. ಕೇವಲ ಭಿನ್ನವಾದ ಚಿತ್ರವನ್ನು ಮಾಡಿದ್ದಾರೆ. ವಿಶ್ವದ ಆದಿ ಅರ್ಥಾತ್ ಸತ್ಯಯುಗದಲ್ಲಿ ಅಪಾರವಾದ ಸುಖವಿತ್ತು ಎಂದು ನೀವು ತಿಳಿದುಕೊಂಡಿದ್ದೀರಿ. ಈಗ ಪುನಃ ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖದ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೀರಿ. ಲೌಕಿಕ ತಾಯಿ-ತಂದೆಗೆ ಈ ಮಹಿಮೆಯನ್ನು ಮಾಡುವುದಿಲ್ಲ. ಇದು ಬೇಹದ್ದಿನ ತಾಯಿ-ತಂದೆಯ ಮಾತಾಗಿದೆ. ಪರಮಪಿತ ಪರಮಾತ್ಮನಿಗೆ ಮಾತ್ರ ಮಾತಾ-ಪಿತ ಎಂದು ಹೇಳಲಾಗುತ್ತದೆ ಆದರೆ ಅವರು ನಿರಾಕಾರನಾಗಿದ್ದಾರೆ. ಹೊಸ ರಚನೆ, ಹೊಸ ಧರ್ಮಕ್ಕಾಗಿ ಹೊಸ ಜ್ಞಾನವಾಗಿದೆ ಎಂದು ಅನೇಕ ಬಾರಿ ತಿಳಿಸಲಾಗಿದೆ. ದೇವೀ-ದೇವತಾ ಧರ್ಮವು ಈಗ ಇಲ್ಲದಂತಾಗಿದೆ. ನಮ್ಮದು ದೇವೀ-ದೇವತಾ ಧರ್ಮವೆಂದು ಯಾರೂ ಸಹ ಹೇಳುವುದಿಲ್ಲ ಏಕೆಂದರೆ ಅವರು ಸಂಪೂರ್ಣ ನಿರ್ವಿಕಾರಿ ಆಗಿದ್ದರು. ಈಗ ಎಲ್ಲರೂ ವಿಕಾರಿಗಳಾಗಿದ್ದಾರೆ ಹಾಗೂ ಆ ಧರ್ಮವು ಅಗತ್ಯವಾಗಿ ಪ್ರಾಯಃ ಲೋಪವಾಗಬೇಕಾಗುತ್ತದೆ. ಮತ್ತೆ ಆ ಧರ್ಮ ಸ್ಥಾಪನೆ ಮಾಡುವ ಸಲುವಾಗಿ ತಂದೆಯು ಬರಬೇಕಾಗುತ್ತದೆ. ಈಗ ನೀವು ಮಕ್ಕಳು ತಂದೆ ಹಾಗೂ ತಾಯಿಯನ್ನು ನೆನಪು ಮಾಡಬೇಕು. ಆಸ್ತಿಗಾಗಿ ತಾಯಿ-ತಂದೆಯಿಂದ ಜನ್ಮ ಪಡೆದು ತಂದೆಯನ್ನು ನೆನಪು ಮಾಡಬೇಕು. ಜನ್ಮವನ್ನೇನೋ ತೆಗೆದುಕೊಂಡಿದ್ದೀರಿ ಆದರೆ ಯಾರ ಮೂಲಕ ತಾಯಿಯಿಂದ ಜನ್ಮ ತೆಗೆದುಕೊಳ್ಳುತ್ತಾರೆ? ಇಲ್ಲಿಯೂ ಸಹ ಅದೇರೀತಿ ಬ್ರಹ್ಮಾ ತಾಯಿಯ ಮೂಲಕ ನೀವು ಮಕ್ಕಳಾಗಿದ್ದೀರಿ. ತಾಯಿಯ ಮೂಲಕ ಶಿವ ತಂದೆಯಿಂದ ಅಸ್ತಿ ತೆಗೆದುಕೊಳ್ಳಲು ನೆನಪು ಮಾಡುತ್ತೀರಿ ಆದರೆ ಕೆಲವರಿಗೆ ನಿಶ್ಚಯವಿದೆ, ಕೆಲವರಿಗೆ ನಿಶ್ಚಯವಿಲ್ಲ. ಎಲ್ಲರಿಗೂ ನಿಶ್ಚಯವಿದೆ ಎಂದಲ್ಲ ಏಕೆಂದರೆ ಮಾಯೆ ಮರೆಸುತ್ತದೆ. ಒಂದಲ್ಲ ಒಂದು ಕಡೆ ಸಿಲುಕಿಸುತ್ತದೆ. ಶ್ರೀಮತದಂತೆ ನಡೆಯುವವರು ತಮ್ಮ ತಪ್ಪಿನ ಭ್ರಮೆಯಲ್ಲಿ ಸಿಕ್ಕಿಕೊಳ್ಳುತ್ತಾರೆ. ನಿಶ್ಚಯವಿದ್ದರೆ ಮತ್ತೆ ಎಲ್ಲಾ ಮಾತುಗಳನ್ನು ಬಿಟ್ಟು ಬಿಡುತ್ತಾರೆ. ನಾವು ತಂದೆಯಿಂದ ಕೇಳಬೇಕು ಹಾಗೂ ಹೇಳಬೇಕು. ಕೆಲವರು ನಾವು ಸೇವೆ ಮಾಡಲು ಆಗುವುದಿಲ್ಲವೆಂದು ಹೇಳುತ್ತಾರೆ ಆದರೆ ಪ್ರಜೆಗಳನ್ನು ಮಾಡುವುದಿಲ್ಲವೆಂದರೆ ರಾಜರಾಗುವುದಿಲ್ಲ. ಒಳ್ಳೆಯದು - ಬೇರೆ ಏನೂ ಮಾಡದಿದ್ದರೆ ಕೇವಲ ಶಿವ ತಂದೆಯನ್ನು ನೆನಪು ಮಾಡಿ, ಆಗ ಸ್ವರ್ಗದಲ್ಲಿ ಬರುತ್ತೀರಿ. ಒಳ್ಳೆಯದು - ವಿಕಾರಗಳನ್ನು ಗೆಲ್ಲುವ ಶ್ರಮ ಪಡಲು ಆಗದಿದ್ದರೆ ಕೇವಲ ತಂದೆಯನ್ನು ನೆನಪು ಮಾಡಿದರೂ ಸಹ ಸ್ವರ್ಗದಲ್ಲಿ ಬರುತ್ತೀರಿ ಆದರೆ ಕಡಿಮೆ ಪದವಿ ಸಿಗುತ್ತದೆ.

ತಂದೆಯು ತಿಳಿಸುತ್ತಾರೆ - ಭಕ್ತಿಯ ಪಾತ್ರವು ಈಗ ಸಮಾಪ್ತಿಯಾಗಬೇಕಾಗಿದೆ. ಭಕ್ತಿಯ ಫಲವನ್ನು ಕೊಡಲು ತಂದೆಯು ಬಂದಿದ್ದಾರೆ. ನೀವೇ ನಂಬರ್ವಾರಾಗಿ ಭಕ್ತಿಯನ್ನು ಪೂರ್ಣಗೊಳಿಸುತ್ತೀರಿ. ಮೊಟ್ಟ ಮೊದಲು ಶಿವ ತಂದೆಯ ಪೂಜೆಯನ್ನು ನಂತರ ಬ್ರಹ್ಮಾ, ವಿಷ್ಣು, ಶಂಕರನ ಪೂಜೆಯನ್ನು ಮಾಡುತ್ತೀರಿ. ಈಗ ನೋಡಿ....! ಬೀದಿ-ಬೀದಿಯಲ್ಲಿ ಎಷ್ಟೊಂದು ಮಂದಿರಗಳನ್ನು ಮಾಡಿದ್ದಾರೆ. ಎಷ್ಟೊಂದು ಸತ್ಸಂಗಗಳು ನಡೆಯುತ್ತವೆ. ಈಗ ಎಲ್ಲಾ ವಸ್ತುಗಳು ಬಹಳ ಆಗಿ ಬಿಟ್ಟಿವೆ. ಸತ್ಯಯುಗದಲ್ಲಿ ಇದೇನೂ ಇರುವುದಿಲ್ಲ. ಒಂದು ಮಂದಿರವೂ ಸಹ ಇರುವುದಿಲ್ಲ. ಈಗಂತು ಭಕ್ತಿಯ ಸಾಮಗ್ರಿಗಳು ಎಷ್ಟೊಂದಿವೆ. ದ್ವಾಪರ-ಕಲಿಯುಗವು ಭಕ್ತಿಮಾರ್ಗದ ಯುಗವಾಗಿದೆ. ತಮೋಪ್ರಧಾನವಾಗುವ ಯುಗವಾಗಿದೆ. ಈಗ ತಂದೆಯು ಈ ಎಲ್ಲಾ ಗೊಂದಲಗಳಿಂದ ಬಿಡಿಸುತ್ತಾರೆ. ಕೆಟ್ಟದ್ದನ್ನು ಕೇಳಬೇಡಿ, ಕೆಟ್ಟದ್ದನ್ನು ನೋಡಬೇಡಿ, ದೇಹ ಸಹಿತ ಎಲ್ಲದರ ಜೊತೆ ಮಮತ್ವವನ್ನು ತೆಗೆಯಿರಿ ಎಂದು ತಂದೆಯು ಹೇಳುತ್ತಾರೆ. ಈಗ ನೀವು ಹೊಸ ಮನೆಗೆ ಹೋಗಬೇಕಾಗಿದೆ. ಯಾವಾಗ ಸ್ಥಾಪನೆಯಾಗುತ್ತದೆ ಆಗ

ಹೋಗುತ್ತೀರಲ್ಲವೇ - ಇದು ದುಃಖಧಾಮ ಹಳೆಯ ಪ್ರಪಂಚವಾಗಿದೆ. ಇದು ಅಂತಿಮ ಜನ್ಮವಾಗಿದೆ. ಈಗ ನೀವು ಈಶ್ವರನ ಮಡಿಲಲ್ಲಿ ಕುಳಿತುಕೊಂಡಿದ್ದೀರಿ. ತಾಯಿ-ತಂದೆಯ ಮಡಿಲಿನಲ್ಲಿದ್ದೀರಿ. ಶಿವ ತಂದೆಯು ಬ್ರಹ್ಮಾ ತಂದೆಯ ಮೂಲಕ ನಿಮಗೆ ಜನ್ಮ ಕೊಡುತ್ತಾರೆ. ಈ ಬ್ರಹ್ಮಾ ನಿಮ್ಮ ತಾಯಿಯಾಗಿದ್ದಾರೆ ಆದರೆ ನಿಮ್ಮ ಬುದ್ಧಿ ಮತ್ತೆ ಶಿವ ತಂದೆಯ ಕಡೆ ಹೊರಟು ಹೋಗುತ್ತದೆ. ನೀವು ತಾಯಿ-ತಂದೆ, ನಾವು ನಿಮ್ಮ ಮಕ್ಕಳು.... ಶಿವ ತಂದೆಯ ಕಡೆ ಮನಸ್ಸು ಹೊರಟು ಹೋಗುತ್ತದೆ. ನೀವು ಪ್ರಿಯತಮೆಯರಾಗಿದ್ದೀರಿ. ನಿಮಗೆ ಶೃಂಗಾರ ಮಾಡಿ ಯೋಗ್ಯರನ್ನಾಗಿ ಮಾಡಲು ಶಿವ ತಂದೆಯು ಬಂದಿದ್ದಾರೆ. ಜ್ಞಾನ ಮತ್ತು ಯೋಗದಿಂದ ಶೃಂಗಾರ ಮಾಡುತ್ತಾರೆ. ಕೇವಲ ನೀವಷ್ಟೇ ಅಲ್ಲ. ಈ ಮಾತು ಎಲ್ಲಾ ಸೇವಾಕೇಂದ್ರದ ಮಕ್ಕಳು ಕೇಳುತ್ತಾರೆ, ಸಾವಿರಾರು ಮಕ್ಕಳು ಕೇಳುತ್ತಿರುತ್ತಾರೆ. ಎಲ್ಲರ ಶೃಂಗಾರವಾಗುತ್ತದೆ. ಹೀಗೆ ಎಷ್ಟೊಂದು ಶೃಂಗಾರ ಮಾಡುತ್ತಾ-ಮಾಡುತ್ತಾ ಮತ್ತೆ ಮಲಿನವಾಗಿ ಬಿಡುತ್ತಾರೆ, ಆದುದರಿಂದ ಕತ್ತೆಯ ಉದಾಹರಣೆ ಕೊಡುತ್ತಾರೆ. ನೀವು ಮಕ್ಕಳು ಸರ್ವಗುಣ ಸಂಪನ್ನ, 16 ಕಲಾ ಸಂಪೂರ್ಣ.... ಆಗಬೇಕು. ಮತ್ತೆ ಮತ್ತೆ ಮಾಯೆಗೆ ಸೋಲಬಾರದು. ತಂದೆಯನ್ನು ನಿಂದನೆ ಮಾಡಿಸುತ್ತಾ, ಮಕ್ಕಳನ್ನೂ ಸಹ ನಿಂದನೆ ಮಾಡಿಸುತ್ತಾರೆ. ನಿಂದನೆ ಮಾಡುವವರು ಇನ್ನೂ ಕೆಳಗೆ ಇಳಿಯುತ್ತಾರೆ. ಈ ಕಾಮ ಮಹಾಶತ್ರುವಿನ ಮೇಲೆ ಸಂಪೂರ್ಣ ವಿಜಯಿಗಳಾಗಬೇಕು. ತಂದೆಯ ಜೊತೆ ಪ್ರತಿಜ್ಞೆ ಮಾಡಬೇಕು. ತಂದೆ ಸ್ವರ್ಗದ ರಚಯಿತನಾಗಿದ್ದಾರೆ, ನಮ್ಮನ್ನು ಅಗತ್ಯವಾಗಿ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಯಾರು ಈ ಸಹಜ ರಾಜಯೋಗವನ್ನು ಕಲಿಯುತ್ತಾರೆ, ಅವರೇ ಸ್ವರ್ಗದಲ್ಲಿ ಬರುತ್ತಾರೆ. ಎಲ್ಲರೂ ಸ್ವರ್ಗದಲ್ಲಿ ಬರುತ್ತಾರೆಂದು ತಿಳಿದುಕೊಳ್ಳಬಾರದು. ಸನ್ಯಾಸಿಗಳು, ಮೊದಲಾದ ಆತ್ಮಗಳು ಸ್ವರ್ಗದಲ್ಲಿ ಬರುವುದಿಲ್ಲ. ಅವರು ಹೊಸ ಪ್ರಪಂಚವನ್ನು ಪರಮಪಿತ ಪರಮಾತ್ಮ ರಚನೆ ಮಾಡುವವರೆಂದು ಹೇಳುತ್ತಾರೆ ಆದರೆ ಆ ಹೊಸ ಪ್ರಪಂಚದಲ್ಲಿ ಯಾರು ರಾಜ್ಯ ಮಾಡುತ್ತಾರೆಂಬ ರಹಸ್ಯವನ್ನು ಯಾರಾದರೂ ಹೇಳಬೇಕಲ್ಲವೇ! ಭಾರತ ಪ್ರಾಚೀನವೆಂದು ತಿಳಿದುಕೊಂಡಿದ್ದಾರೆ. ಆದರೆ ಭಾರತವಾಸಿಗಳೇ ಯಥಾರ್ಥವಾಗಿ ತಿಳಿದುಕೊಂಡಿಲ್ಲ ಅಂದಮೇಲೆ ಅವರು ಬೇರೆಯವರಿಗೆ ಏನೆಂದು ತಿಳಿಸಿಕೊಡುತ್ತಾರೆ? ಭಾರತದಂತಹ ಪವಿತ್ರ ಖಂಡ ಬೇರೆ ಯಾವ ಖಂಡವೂ ಇಲ್ಲವೆಂದು ಹೇಳಬಹುದು. ಭಾರತದಂತಹ ಸಂಪದ್ಭರಿತವಾದ ಖಂಡ ಬೇರೆ ಯಾವುದೂ ಇಲ್ಲ. ಅಮೇರಿಕಾ ಮೊದಲಾದವರ ಬಳಿ ಬಹಳಷ್ಟು ಹಣವಿದೆ, ಆದರೆ ಭಾರತದ ಹೋಲಿಕೆಯಲ್ಲಿ ಅದು ಕವಡೆಯ ಸಮಾನವಾಗಿದೆ. ಭಾರತವೇ ಎಲ್ಲಾ ಧರ್ಮಗಳ ತೀರ್ಥ ಸ್ಥಾನವಾಗಿದೆ. ಸರ್ವ ಆತ್ಮಗಳ ತಂದೆ ನರಕವನ್ನು ಸ್ವರ್ಗವನ್ನಾಗಿ ಮಾಡಲು ಭಾರತದಲ್ಲಿಯೇ ಬರುತ್ತಾರೆ ಹಾಗೂ ಬಂದು ಎಲ್ಲರನ್ನೂ ಬಿಡುಗಡೆ ಮಾಡುತ್ತಾರೆ. ಎಲ್ಲಾ ಮಹಿಮೆಯು ತಂದೆಗೆ ಸಲ್ಲುತ್ತದೆ. ಹೂಗಳನ್ನು ಅವರಿಗೆ ಅರ್ಪಣೆ ಮಾಡುತ್ತಾರೆ. ಗೀತೆಯಲ್ಲಿ ಅವರ ಹೆಸರನ್ನು ಬದಲಾಯಿಸಿರುವ ಕಾರಣ ಗೀತೆಯ ಭಗವಂತನ ಮಹತ್ವವನ್ನು ಕಡಿಮೆ ಮಾಡಿ ಬಿಟ್ಟಿದ್ದಾರೆ. ಕ್ರಿಶ್ಚಿಯನ್ನರು ಉಲ್ಟಾ-ಸುಲ್ಟಾ ಮಾತುಗಳಿಂದ ನಿಂದನೆ ಮಾಡಿ ಅನೇಕರನ್ನು ಅವರ ಧರ್ಮದಲ್ಲಿ ಪರಿವರ್ತನೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಎಷ್ಟೊಂದು ಕ್ರಿಶ್ಚಿಯನ್ನರಾಗಿರಬೇಕು, ಹೀಗೆ ಕಲ್ಪ-ಕಲ್ಪವು ಆಗುತ್ತಿರುತ್ತದೆ. ಯಾವಾಗ ಈ ರೀತಿ ಧರ್ಮಗ್ಲಾನಿಯಾಗುತ್ತದೆ ಆಗ ಮತ್ತೆ ನಾನು ಬಂದು ಭಾರತವನ್ನು ವಜ್ರ ಸಮಾನ ಮಾಡುತ್ತೇನೆಂದು ತಂದೆಯು ತಿಳಿಸುತ್ತಾರೆ. ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖ ಸಿಗುತ್ತದೆ, ಸ್ವರ್ಗದ ಸ್ಥಾಪನೆಯಾಗುತ್ತಿದೆ. ಅವರು ಶಿವತಂದೆ ಆಗಿದ್ದಾರೆ. ನೀವು ಶಿವಶಕ್ತಿ ಭಾರತ ಮಾತೆಯರಾಗಿದ್ದೀರಿ. ಆದರೆ ನೀವು ಗುಪ್ತವಾಗಿದ್ದೀರಿ. ಈ ನಿಮ್ಮ ಶಿವಶಕ್ತಿ ಸೈನ್ಯವನ್ನು ಮನುಷ್ಯರು ಹೇಗೆ ತಿಳಿದುಕೊಳ್ಳುತ್ತಾರೆ! ನಾವು ಶಿವಶಕ್ತಿ ಪಾಂಡವ ಸೇನೆ ಆಗಿದ್ದೇವೆಂದು ನೀವು ಮಾತ್ರ ತಿಳಿದುಕೊಂಡಿದ್ದೀರಿ. ಈಗ ಹೊಸ ರಾಜಧಾನಿಯ ಸ್ಥಾಪನೆಯಾಗುತ್ತಿದೆ. ಇದು ಹಳೆಯ ಪತಿತ ಪ್ರಪಂಚವಾಗಿದೆ, ಅದು ಹೊಸ ಪಾವನ ಪ್ರಪಂಚವಾಗಿದೆ. ಈ ಪತಿತ ಪ್ರಪಂಚದಲ್ಲಿ ಯಾರೂ ಪಾವನರಿಲ್ಲ. ಶಾಸ್ತ್ರಗಳಲ್ಲಿ ಭಿನ್ನ-ಭಿನ್ನ ಮಾತುಗಳನ್ನು ಬರೆದಿದ್ದಾರೆ. ಅವುಗಳನ್ನು ಹೇಳುವಂತಹವರೂ ಸಹ ಬಹಳ ಬುದ್ಧಿವಂತರಾಗಿರುತ್ತಾರೆ. ಶಾಸ್ತ್ರಗಳನ್ನು ಕೇಳುತ್ತಾ 7 ದಿನದ ಪಾಠವನ್ನು ರುದ್ರ ಜ್ಞಾನ ಯಜ್ಞ ಮೊದಲಾದವುಗಳನ್ನು ರಚಿಸುತ್ತಾ ಬಂದಿದ್ದಾರೆ, ಆದರೂ ಸಹ ಪ್ರಪಂಚವು ತಮೋಪ್ರಧಾನವಾಗಲೇಬೇಕು. ಅವರು ಏನು ಬೇಕಾದರೂ ಮಾಡಲಿ, ಹಿಂತಿರುಗಿ ಯಾರೂ ಹೋಗಲು ಸಾಧ್ಯವಿಲ್ಲ. ಮನುಷ್ಯರಿಗೆ ಜ್ಞಾನವಿಲ್ಲದ ಕಾರಣ ಶಾಸ್ತ್ರಗಳು ಕಿವಿಗೆ ಇಂಪಾಗಿರುತ್ತದೆ ಆದರೆ ನಿಮಗೆ ಶಾಸ್ತ್ರಗಳ ಮಾತು ಈಗ ಇಷ್ಟವಾಗುವುದಿಲ್ಲ ಆದುದರಿಂದ ತಂದೆ ಹೇಳುತ್ತಾರೆ - ಕೆಟ್ಟದ್ದನ್ನು ಕೇಳಬೇಡಿ... ಕೇವಲ ನನ್ನನ್ನು ನೆನಪು ಮಾಡಿ, ಶ್ರೀಮತದಂತೆ ನಡೆದಾಗ ಶ್ರೇಷ್ಠರಾಗುತ್ತೀರಿ. ಆಸುರೀ ಮತದಂತೆ ನಡೆಯುವುದರಿಂದ ಅಸುರರಾಗುತ್ತಾ ಹೋಗುತ್ತೀರಿ. ಅದು ರಾವಣನ ಮತವಾಗಿದೆ. ತಂದೆಯು ಪ್ರತಿಯೊಂದು ಮಾತನ್ನು ಸ್ಪಷ್ಟವಾಗಿ ತಿಳಿಸಿ ಕೊಡುತ್ತಾರೆ. ಇಲ್ಲಿ ಬೀಜ ಹಾಗೂ ವೃಕ್ಷದ ಜ್ಞಾನವಿದೆ. ಇದನ್ನು ಕಲ್ಪವೃಕ್ಷವೆಂದು ಕರೆಯಲಾಗುತ್ತದೆ. ಈ ವೃಕ್ಷವು 5000 ವರ್ಷ ಆಯಸ್ಸಾಗಿದೆ. ಒಂದುವೇಳೆ ಸತ್ಯಯುಗಕ್ಕೆ ಲಕ್ಷಾಂತರ ವರ್ಷವಾಗಿದ್ದರೆ ಹಿಂದೂಗಳ ಸಂಖ್ಯೆ ಬಹಳಷ್ಟಾಗುತ್ತಿತ್ತು.

ಈಗ ನೀವು ಮಕ್ಕಳು ಈ ಮಾತುಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ - ವಿನಾಶವಂತು ಆಗಲೇಬೇಕು, ಪ್ರಾಕೃತಿಕ ಪ್ರಕೋಪಗಳು ಬರುತ್ತಿರುತ್ತವೆ. ಇವುಗಳನ್ನು ಅವರು ಈಶ್ವರನ ಲೀಲೆ ಎಂದು ಹೇಳಿ ಬಿಡುತ್ತಾರೆ. ಆದರೆ ಪರಮಾತ್ಮ ಈ ರೀತಿ ಪ್ರಕೋಪಗಳು ಆಗುವಂತೆ ಮಾಡುತ್ತಾರೆಯೇ! ಇದಂತು ನಾಟಕದಲ್ಲಿ ನಿಗಧಿಯಾಗಿದೆ. ವಿನಾಶವಾಗದೆ ಹೊಸ ಪ್ರಪಂಚವನ್ನು ಹೇಗೆ ರಚನೆ ಮಾಡುವುದು? ಮಹಾಭಾರತ ಯುದ್ಧದಿಂದ ಮನೆಯ ಬಾಗಿಲು ತೆರೆಯುತ್ತದೆ. ಗುರಿಯು ಬಹಳ ಉನ್ನತವಾಗಿದೆ ಎಂದು ಮಕ್ಕಳಿಗೆ ಸಾಕ್ಷಾತ್ಕಾರವೂ ಆಗಿದೆ ಆದರೆ ಕೆಲವರು ಧೈರ್ಯವಿಡುವುದಿಲ್ಲ. ನೋಡಿ..... ತಂದೆ ತಿಳಿಸುತ್ತಿದ್ದರು - ಈ ಮೃತ್ಯು ಲೋಕದಲ್ಲಿ ನಿಮ್ಮ ಅಂತಿಮ ಜನ್ಮವಾಗಿದೆ. ಈಗ ನಾನು ನಿಮ್ಮನ್ನು ಅಮರಲೋಕದ ಮಾಲೀಕರನ್ನಾಗಿ ಮಾಡಲು

ಬಂದಿದ್ದೇನೆ. ಆದುದರಿಂದ ಈ ಅಂತಿಮ ಜನ್ಮದಲ್ಲಿ ತಂದೆಯು ಹೇಳುವುದರಲ್ಲಿ ಮಾನ್ಯತೆ ಕೊಡಿ. ಪವಿತ್ರತೆಯ ಪ್ರತಿಜ್ಞೆಯನ್ನು ಮಾಡಿ. ಲೌಕಿಕ ತಂದೆಯೂ ಸಹ ಒಂದುವೇಳೆ ಮಕ್ಕಳು ಹೇಳಿದಂತೆ ಕೇಳದಿದ್ದರೆ ನೀನು ಕುಪುತ್ರ ಮಗು ಎಂದು ತಂದೆ ಹೇಳುತ್ತಾರಲ್ಲವೇ! ತಂದೆಯಂತು ಸರ್ವಶಕ್ತಿವಂತನಾಗಿದ್ದಾರೆ, ಅವರ ಆಜ್ಞೆಯಂತೆ ನಡೆಯುವುದರಿಂದ ಸಹಯೋಗವು ಸಿಗುತ್ತದೆ. ಆಗ ಮಕ್ಕಳು ಯೋಚನೆ ಮಾಡುತ್ತೇವೆಂದು ಹೇಳುತ್ತಾರೆ. ಅರೇ...! ಒಂದುವೇಳೆ ನಾಳೆ ಶರೀರ ಬಿಟ್ಟರೆ ಆಸ್ತಿ ಸಿಗುವುದಿಲ್ಲ. ಪಂಚ ವಿಕಾರಗಳೆಂಬ ಕಾಯಿಲೆ ಬಹಳ ಕಠಿಣವಾಗಿದೆ. ಮಾಯೆಯು ಎಲ್ಲರನ್ನು ರೋಗಿಗಳನ್ನಾಗಿ ಮಾಡಿದೆ ಆದುದರಿಂದ ಈಗ ನನ್ನ ಶ್ರೀಮತದಂತೆ ನಡೆಯಿರಿ ಎಂದು ತಂದೆಯು ಹೇಳುತ್ತಾರೆ. ಮಾಯೆಯಂತು ಬಹಳ ವಿಕಲ್ಪಗಳನ್ನು ತರುತ್ತದೆ, ಬಹಳ ಬಿರುಗಾಳಿಗಳೂ ಬರುತ್ತವೆ. ಹೇಗೆ ದಿವಾಳಿಯಾಗಿ ಬಿಡುತ್ತಾರೆ, ಆಗ ಇದೇನಾಯಿತು..! ತಂದೆಗೆ ಮಕ್ಕಳಾದ ಕಾರಣ ಈ ಸ್ಥಿತಿ ಆಯಿತೆಂದು ಹೇಳುತ್ತಾರೆ ಆದರೆ ತಂದೆಯು ಹೇಳುತ್ತಾರೆ - ನೀವು ಎಲ್ಲವನ್ನು ತಂದೆಗೆ ಕೊಟ್ಟು ಟ್ರಸ್ಟಿ ಆಗಿದ್ದೀರಿ. ಅದರ ರಿಟರ್ನ್ ನಿಮಗೆ ಎಲ್ಲವನ್ನು ಕೊಡುತ್ತೇನೆ. ನೀವು ಏಕೆ ಚಿಂತೆ ಮಾಡುತ್ತೀರಿ!

ಈಗ ಭಾರತದ ಹಡಗು ಮುಳಗಿದೆ, ತಂದೆಯು ಅದನ್ನು ಪಾರು ಮಾಡಲು ಬಂದಿದ್ದಾರೆ ಎನ್ನುವುದನ್ನು ನೀವು ತಿಳಿದುಕೊಂಡಿದ್ದೀರಿ. ತಂದೆಯ ವಿನಃ ಸ್ವರ್ಗವನ್ನು ಯಾರು ಮಾಡುತ್ತಾರೆ? ಚಿನ್ನದ ದ್ವಾರಿಕಾ ಸಮುದ್ರದ ಕೆಳಗೆ ಹೋಯಿತು ಎಂದು ಹೇಳುತ್ತಾರೆ, ಹಾಗಾದರೆ ಅದು ಮೇಲೆ ಹೇಗೆ ಬರುತ್ತದೆ. ಮೀನು, ಮೊಸಳೆ ಮೇಲೆ ತರುತ್ತದೆಯೇನು? ಇದು ನಾಟಕದ ಚಕ್ರವಾಗಿದೆ, ಆದುದರಿಂದ ಇದನ್ನು ತಿಳಿದುಕೊಳ್ಳಬೇಕು. ಸತ್ಯಯುಗ, ತ್ರೇತಾ ಯಾವಾಗ ಮೇಲೆ ಇರುತ್ತದೆ, ಆಗ ದ್ವಾಪರ ಕಲಿಯುಗ ಕೆಳಗಡೆ ಹೋಗುತ್ತದೆ. ಸೃಷ್ಟಿಚಕ್ರದ ಚಿತ್ರವನ್ನು ಇಷ್ಟೊಂದು ದೊಡ್ಡದಾಗಿ ಮಾಡಬೇಕು, ಹೇಗೆ ಕನ್ನಡಿಯನ್ನು ದೊಡ್ಡ ಸೈಜಿನಲ್ಲಿ ಮಾಡುತ್ತಾರಲ್ಲವೇ! ಮಕ್ಕಳೇ ಕನ್ನಡಿಯಲ್ಲಿ ನಿಮ್ಮ ಮುಖವನ್ನು ನೋಡಿಕೊಳ್ಳಿ. ಮಂಗನ ರೀತಿಯಂತೂ ಇಲ್ಲವೇ! ಎಂದು ತಂದೆ ಹೇಳುತ್ತಾರೆ. ಯಾರಲ್ಲಿ ವಿಕಾರವಿದೆಯೋ ಅವರು ಕೋತಿಗಿಂತಲೂ ಕನಿಷ್ಠರಾಗಿದ್ದಾರೆ. ದೇವತೆಗಳಂತು ಮಂದಿರಕ್ಕೆ ಯೋಗ್ಯರಾಗಿದ್ದಾರೆ. ವಾಸ್ತವದಲ್ಲಿ ಸನ್ಯಾಸಿಗಳಗೋಸ್ಕರ ಯಾವುದೇ ಮಂದಿರವನ್ನು ಮಾಡುವುದಿಲ್ಲ, ಕೇವಲ ದೇವತೆಗಳ ಮಂದಿರವನ್ನು ಮಾಡುತ್ತಾರೆ ಏಕೆಂದರೆ ದೇವತೆಗಳ ಆತ್ಮ ಹಾಗೂ ಶರೀರವೆರಡು ಪವಿತ್ರವಾಗಿದೆ. ಇಲ್ಲಿ ಪವಿತ್ರ ಶರೀರ ಸಿಗುವುದಿಲ್ಲ. ಮನುಷ್ಯರು ಎಷ್ಟೊಂದು ಯಜ್ಞಗಳನ್ನು ರಚಿಸುತ್ತಾರೆ, ಕಥೆಗಳನ್ನು ಕೇಳುತ್ತಿರುತ್ತಾರೆ, ತಂದೆಯಂತು ಬೇಹದ್ದಿನ ಒಂದೇ ಯಜ್ಞವನ್ನು ರಚಿಸುತ್ತಾರೆ, ಅದನ್ನು ರುದ್ರ ಯಜ್ಞವೆಂದು ಕರೆಯುತ್ತಾರೆ. ಈ ಯಜ್ಞದಿಂದಲೇ ವಿನಾಶ ಜ್ವಾಲೆ ಪ್ರಜ್ವಲಿತವಾಯಿತು. ಈ ಯಜ್ಞದಿಂದ ಎಲ್ಲಾ ಯಜ್ಞಗಳು ಸಮಾಪ್ತಿಯಾಗುತ್ತವೆ. ರುದ್ರ ಜ್ಞಾನ ಯಜ್ಞವು ಪ್ರಖ್ಯಾತಿಯಾಗಿದೆ. ಶಿವ ಜ್ಞಾನ ಯಜ್ಞ ಎಂದು ಎಲ್ಲಿಯೂ ಪ್ರಖ್ಯಾತಿ ಇಲ್ಲ. ಯಜ್ಞದಲ್ಲಿ ರುದ್ರನಿಗೂ ಹಾಗೂ ಸಾಲಿಗ್ರಾಮಗಳಿಗೆ ಪೂಜೆ ನಡೆಯುತ್ತದೆ. ಎಷ್ಟೊಂದು ಸಾಲಿಗ್ರಾಮಗಳನ್ನು ಮಾಡುತ್ತಾರೆ. ಒಂದೇ ದೊಡ್ಡ ಶಿವಲಿಂಗವನ್ನು ಮಾಡುತ್ತಾರೆ. ಅನೇಕ ಪ್ರಜೆಗಳಾಗುತ್ತಾರೆ. ಅವರೆಲ್ಲರ ಸಂಕೇತವನ್ನು ಮಾಡಲು ಸಾಧ್ಯವಾಗುವುದಿಲ್ಲ. ಶಿವ ತಂದೆ ಹಾಗೂ ನಿಮ್ಮ ಮಕ್ಕಳ ಪೂಜೆಯಾಗುತ್ತದೆ. ಏಕೆಂದರೆ ನೀವು ಇಡೀ ವಿಶ್ವವನ್ನು ಮುಕ್ತಮಾಡುತ್ತೀರಿ. ನೀವು ಶಿವಶಕ್ತಿ ಸಾಲ್ವೇಷನ್ ಆರ್ಮೀ ಆಗಿದ್ದೀರಿ. ಸ್ವಯಂನ್ನು ಸರ್ವೋದಯದ ನಾಯಕರೆಂದು ಹೇಳುಕೊಳ್ಳುವವರು ಅನೇಕರಿದ್ದಾರೆ ಆದರೆ ಈಗ ಇಡೀ ಪ್ರಪಂಚದ ಮೇಲೆ ದಯೆ ತೋರಿಸುವವರು ಯಾರೂ ಇಲ್ಲ. ಎಲ್ಲರ ಮೇಲೆ ದಯೆ ತೋರಿಸುವಂತಹ ದಯಾಹೃದಯಿ ಎಂದು ಒಬ್ಬ ಶಿವ ತಂದೆಗೆ ಮಾತ್ರ ಹೇಳಲಾಗುತ್ತದೆ. ಮನುಷ್ಯರು ದೊಡ್ಡ-ದೊಡ್ಡ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಸರ್ವರ ಮೇಲೆ ದಯೆ ಅಥವಾ ಕೃಪೆ ಮಾಡುವುದು ಅರ್ಥಾತ್ ಸುಖಧಾಮದಲ್ಲಿ ಕರೆದುಕೊಂಡು ಹೋಗುವುದು - ಒಬ್ಬ ಪರಮಾತ್ಮನ ಕರ್ತವ್ಯವಾಗಿದೆ. ಸರ್ವರ ಗತಿ-ಸದ್ಗತಿದಾತ ಒಬ್ಬ ಶಿವ ತಂದೆ ಆಗಿದ್ದಾರೆ. ಮನುಷ್ಯರು ಯಾರ ಸದ್ಗತಿಯನ್ನೂ ಸಹ ಮಾಡುವುದಿಲ್ಲ. ಒಬ್ಬರ ಸದ್ಗತಿಯನ್ನು ಮಾಡುವುದು ಅಸಾಧ್ಯವಾದ ಮಾತು. ನೀವು ಶಾಸ್ತ್ರಗಳನ್ನು ಒಪ್ಪಿಕೊಳ್ಳುವುದಿಲ್ಲವೆಂದು ಅವರು ಹೇಳುತ್ತಾರೆ. ಕಣ್ಣಿಂದ ನೋಡುತ್ತಿದ್ದು ಮುಂದೆ ಇರುವ ವಸ್ತುಗಳನ್ನು ಏಕೆ ಮಾನ್ಯತೆ ಕೊಡುವುದಿಲ್ಲ! ಆದರೆ ಈಗ ನಾವು ಶ್ರೀಮತದಂತೆ ನಡೆಯುತ್ತೇವೆ, ಇದರಿಂದ ನಾವು ಶ್ರೇಷ್ಠರಾಗುತ್ತೇವೆ. ಭಗವಂತನ ಶ್ರೀಮತವಾಗಿದೆ. ನಾವು ಕೃಷ್ಣನ ಮತದಂತೆ ನಡೆಯುವುದಿಲ್ಲ. ಕೃಷ್ಣನ ಆತ್ಮವೂ ಸಹ ಹಿಂದಿನ ಜನ್ಮದಲ್ಲಿ ಶ್ರೀಮತದಿಂದ ಅಂತಹ ಶ್ರೇಷ್ಠ ದೇವತೆಯಾಗಿದ್ದನು, ತತತ್ವಂ. ಅವರ ರಾಜಧಾನಿಯೂ ಇರುತ್ತದೆಯಲ್ಲವೇ! ಒಬ್ಬ ಕೃಷ್ಣ ಏನು ಮಾಡುತ್ತಾನೆ! ಮುಳ್ಳುಗಳನ್ನು ಹೂಗಳನ್ನಾಗಿ ಒಬ್ಬ ತಂದೆಯ ವಿನಃ ಬೇರೆ ಯಾರೂ ಮಾಡಲು ಆಗುವುದಿಲ್ಲ. ತಂದೆ ಬಂದಿರುವಾಗ ಅಗತ್ಯವಾಗಿ ಸ್ವರ್ಗವನ್ನು ರಚನೆ ಮಾಡುತ್ತಾರಲ್ಲವೇ! ಇಲ್ಲದಿದ್ದರೆ ಅವತಾರವಾಗುವ ಆವಶ್ಯಕತೆ ಏನಿತ್ತು? ಅಗತ್ಯವಾಗಿ ಭಾರತವನ್ನು ಸ್ವರ್ಗ ಮಾಡಿದ್ದರು ಹಾಗೂ ಈಗ ಮತ್ತೆ ಮಾಡುತ್ತಿದ್ದಾರೆ. ಅಲ್ಲಿ ಮಂದಿರ ಮೊದಲಾದವುಗಳು ಇರುವುದಿಲ್ಲ. ತಂದೆ ಭಾರತವನ್ನು ಸ್ವರ್ಗವನ್ನಾಗಿ ಮಾಡಲು ಭಾರತದಲ್ಲಿ ಬಂದಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಮಾಯೆಯ ಬಿರುಗಾಳಿ ಎಲ್ಲರಿಗೂ ಬರುತ್ತದೆ ಎಂದು ತಂದೆಯು ತಿಳಿಸಿದ್ದಾರೆ. ಬಂದು ತಂದೆಯನ್ನು ಕೇಳಿ, ಜ್ಞಾನ ಹಾಗೂ ಯೋಗದ ಅನುಭವವನ್ನು ಕೇಳಿ. ಯಾವ ಸಂಕಲ್ಪ ವಿಕಲ್ಪವಾಗುತ್ತದೆ, ಅಂತಹ ಅನುಭವವನ್ನು ಕೇಳಿ. ಈ ತಂದೆ ಎಲ್ಲರಿಗಿಂತ ಮುಂದೆ ಇದ್ದಾರೆ. ಆದುದರಿಂದ ಈ ಬಿರುಗಾಳಿಗಳಿಂದ ಅಗತ್ಯವಾಗಿ ಅವರು ತೇರ್ಗಡೆ ಆಗುತ್ತಾರೆ. ನಾವು ತಂದೆಯನ್ನು ನೆನಪು ಮಾಡುತ್ತಿದ್ದರೂ ಸಹ ಮಾಯೆ ಕಡಿಮೆಯೇನಲ್ಲ. ನೀವೆಷ್ಟು ಬಲಶಾಲಿಗಳು (ರುಸ್ತುಮ್) ಆಗುತ್ತೀರಿ, ಮಾಯೆ ಹೆದರಿಸುತ್ತದೆ, ಆದರೆ ಭಯ ಪಡಬಾರದು. ಬಾಬಾ ಮಾಯೆ ತೊಂದರೆ ಮಾಡದಂತೆ ಮಾಯೆಗೆ ಹೇಳಿ ಎಂದು ತಂದೆಗೆ ಬರೆಯುತ್ತಾರೆ. ಆದರೆ ಮಾಯೆಯ ಬಿರುಗಾಳಿಯಂತು ಬಹಳ

ತೊಂದರೆ ಕೊಡುತ್ತದೆ, ಭಯ ಪಡಬಾರದು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳಪ್ರ ತಿ ಮಾತಾಪಿತಾ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಗೆ ತಮ್ಮ ಪೂರ್ಣ ಲೆಕ್ಕವನ್ನು ಕೊಟ್ಟು, ಟ್ರಸ್ಟಿಯಾಗಿ ಎಲ್ಲಾ ಚಿಂತೆಗಳಿಂದ ಮುಕ್ತರಾಗಬೇಕು. ತಂದೆಯ ಆಜ್ಞೆಯಂತೆ ಪೂರ್ಣವಾಗಿ ನಡೆದು ಸಹಯೋಗಕ್ಕೆ ಪಾತ್ರರಾಗಬೇಕು.

2. ಮುಳುಗಿರುವ ಮನುಷ್ಯರ ಹಡಗನ್ನು ಸಾಲ್ವೇಷನ್ ಆರ್ಮಿಯಾಗಿ ಪಾರು ಮಾಡಬೇಕು. ತಂದೆಗೆ ಸಹಯೋಗಿಗಳಾಗಿ ಪೂಜ್ಯನೀಯ ಸ್ಥಿತಿಗೆ ಯೋಗ್ಯರಾಗಬೇಕು.

ವರದಾನ: ಪ್ರತೀ ಸೆಕೆಂಡ್, ಪ್ರತೀ ಖಜಾನೆಯನ್ನು ಸಫಲಗೊಳಿಸುತ್ತಾ ಸಫಲತೆಯ ಖುಷಿಯ ಅನುಭವ ಮಾಡುವಂತಹ ಸಫಲತಾಮೂರ್ತಿ ಭವ.

ಸಫಲತಾ ಮೂರ್ತಿಯಾಗುವ ವಿಶೇಷ ಸಾಧನವಾಗಿದೆ - ಪ್ರತೀ ಸೆಕೆಂಡ್, ಪ್ರತೀ ಶ್ವಾಸವನ್ನೂ, ಪ್ರತಿಯೊಂದು ಖಜಾನೆಯನ್ನೂ ಸಫಲಗೊಳಿಸುವುದು. ಒಂದುವೇಳೆ ಸಂಕಲ್ಪ, ನುಡಿ, ಕರ್ಮ, ಸಂಬಂಧ-ಸಂಪರ್ಕದಲ್ಲೇನಾದರೂ ಸರ್ವ ಪ್ರಕಾರದ ಸಫಲತೆಯ ಅನುಭವ ಮಾಡಬೇಕೆಂದು ಬಯಸುತ್ತೀರೆಂದರೆ ಸಫಲಗೊಳಿಸುತ್ತಾ ಸಾಗಿರಿ, ವ್ಯರ್ಥವಾಗಬಾರದು. ಭಲೆ ಅದನ್ನು ತಮಗಾಗಿ ಸಫಲ ಮಾಡಿರಿ ಅಥವಾ ಅನ್ಯ ಆತ್ಮರಿಗಾಗಿ ಸಫಲ ಮಾಡಿರಿ, ಅದರಿಂದ ಸ್ವತಹವಾಗಿಯೇ ಸಫಲತೆಯ ಖುಷಿಯ ಅನುಭವ ಮಾಡುತ್ತಾ ಇರುತ್ತೀರಿ ಏಕೆಂದರೆ ಸಫಲಗೊಳಿಸುವುದು ಎಂದರೆ ವರ್ತಮಾನದಲ್ಲಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವುದು ಹಾಗೂ ಭವಿಷ್ಯಕ್ಕಾಗಿ ಜಮಾ ಮಾಡುವುದಾಗಿದೆ.

ಸ್ಲೋಗನ್: ಯಾವಾಗ ಸಂಕಲ್ಪದಲ್ಲಿಯೂ ಯಾವುದೇ ಆಕರ್ಷಣೆಯು ಆಕರ್ಷಿಸುವುದಿಲ್ಲವೋ ಆಗ ಹೇಳಲಾಗುತ್ತದೆ - ಸಂಪೂರ್ಣತೆಯ ಸಮೀಪತೆ.